# ಕರ್ನಾಟಕ ಆರ್ಥಿಕ ಅಪರಾಧಗಳ (ಕಾಲಪರಿಮಿತಿ ಅನ್ವಯಿಸದಿರುವಿಕೆ) ಅಧಿನಿಯಮ, 1981

(ಕರ್ನಾಟಕ ರಾಜ್ಯಪತ್ರ, ಗುರುವಾರ, ಏಪ್ರಿಲ್ 27, 2006, ಭಾಗ – IVಎ, ಪುಟ 561 ರಿಂದ 562ರ ವರೆಗೆ ಪ್ರಕಟಿಸಲಾಗಿದೆ.)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ದಂಡ ಪ್ರಕ್ರಿಯಾ ಸಂಹಿತೆ 1973ರ ಅಧ್ಯಾಯ XXXVI ನ್ನು ಕೆಲವು ಅಪರಾಧಗಳಿಗೆ ಅನ್ವಯಿಸದಿರುವುದು.
   ಅನುಸೂಚಿ

* * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**1982ರ ಅಧಿನಿಯಮ ಸಂಖ್ಯೆ 10.–** 1973ರ ದಂಡ ಪ್ರಕ್ರಿಯಾ ಸಂಹಿತೆಯ ಅಧ್ಯಾಯ 36 ರ ಉಪಬಂಧಗಳ ಅಡಿಯಲ್ಲಿ, ಅಪರಾಧಕ್ಕೆ ಸಂಬಂಧಪಟ್ಟಂತೆ ಕ್ರಮ ಕೈಗೊಳ್ಳಲು ಅಪರಾಧವು ಪ್ರಾರಂಭವಾದ ದಿನಾಂಕದಿಂದ ಆರು ತಿಂಗಳ ಕಾಲಪರಿಮಿತಿಯನ್ನು ಗೊತ್ತುಪಡಿಸಲಾಗಿದೆ. ವಿಧೇಯಕದ ಅನುಸೂಚಿಯಲ್ಲಿ ನಮೂದಿಸಲಾದ ಅಧಿನಿಯಮಗಳ ಅಡಿಯಲ್ಲಿನ ಬಹಳಷ್ಟು ಪ್ರಕರಣಗಳಲ್ಲಿ, ತೆರಿಗೆ ನಿರ್ಧರಣಾ ಸಮಯದಲ್ಲಿ ಅಪರಾಧಗಳನ್ನು ಪತ್ತೆ ಹಚ್ಚಲಾಗಿದ್ದು ಆ ವೇಳೆಗೆ ಕಾಲ ಪರಿಮಿತಿಯ ಅವಧಿಯು ಮುಗಿದಿರುತ್ತದೆ. ಕೆಲವು ಆರ್ಥಿಕ ಅಪರಾಧಗಳಿಗೆ ದಂಡ ಪ್ರಕ್ರಿಯಾ ಸಂಹಿತೆಯ ಅಧ್ಯಾಯ XXXVI ರ ಉಪಬಂಧಗಳನ್ನು ಅನ್ವಯಿಸದಿರುವುದಕ್ಕಾಗಿ ಉಪಬಂಧ ಕಲ್ಪಿಸಲು 1974ರ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ "ಆರ್ಥಿಕ ಅಪರಾಧಗಳ (ಕಾಲಪರಿಮಿತಿ ಅನ್ವಯಿಸದಿರುವಿಕೆ) ಅಧಿನಿಯಮ, 1974ನ್ನು (1974ರ ಅಧಿನಿಯಮ 12)ನ್ನು ಭಾರತ ಸರ್ಕಾರವು ಅಧಿನಿಯಮಿತಗೊಳಿಸಿದೆ. ಹಾಗೆಯೇ ಪ್ರಸಕ್ತ ವಿಧೇಯಕವು, ವಿಧೇಯಕದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ, ಅಧಿನಿಯಮಿತಿಯ ಅಡಿಯಲ್ಲಿ ದಂಡನೀಯವಾದ ಆರ್ಥಿಕ ಅಪರಾಧಗಳಿಗೆ, 1973ರ ದಂಡ ಪ್ರಕ್ರಿಯಾ ಸಂಹಿತೆಯ ಅಧ್ಯಾಯ XXXVI ರ ಉಪಬಂಧಗಳನ್ನು ಅನ್ವಯಿಸದಿರುವುದಕ್ಕೆ ಉಪಬಂಧ ಕಲ್ಪಿಸುತ್ತದೆ.

(ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ IV–2ಎ ದಿನಾಂಕ: 3.2.1981ರಲ್ಲಿ ಸಂಖ್ಯೆ 100 ಎಂದು ಪ್ರಕಟಿಸಲಾಗಿದೆ).

## 1982ರ ಕರ್ನಾಟಕ ಅಧಿನಿಯಮ ಸಂಖ್ಯೆ 10

(1982ರ ಮಾರ್ಚ್ ಇಪ್ಪತ್ತೊಂಬತ್ತನೇ ದಿನದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ಆರ್ಥಿಕ ಅಪರಾಧಗಳ (ಕಾಲ ಪರಿಮಿತಿ ಅನ್ವಯಿಸದಿರುವಿಕೆ) ಅಧಿನಿಯಮ, 1981

(1982ರ ಮಾರ್ಚ್ ಹನ್ನೆರಡನೇ ದಿನದಂದು ರಾಷ್ಟ್ರಾಧ್ಯಕ್ಷರ ಅನುಮೋದನೆಯನ್ನು ಪಡೆಯಲಾಗಿದೆ)

ಕೆಲವು ಆರ್ಥಿಕ ಅಪರಾಧಗಳಿಗೆ ದಂಡ ಪ್ರಕ್ರಿಯಾ ಸಂಹಿತೆ, 1973ರ ಅಧ್ಯಾಯ XXXVIರ ಉಪಬಂಧಗಳನ್ನು ಅನ್ವಯಿಸದಿರುವುದಕ್ಕೆ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ಇದು ಭಾರತ ಗಣರಾಜ್ಯದ ಮೂವತ್ತೆರಡನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಆರ್ಥಿಕ ಅಪರಾಧಗಳ (ಕಾಲಪರಿಮಿತಿ ಅನ್ವಯಿಸದಿರುವಿಕೆ) ಅಧಿನಿಯಮ, 1981 ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

2. **ದಂಡ ಪ್ರಕ್ರಿಯಾ ಸಂಹಿತೆ, 1973ರ ಅಧ್ಯಾಯ XXXVI ನ್ನು ಕೆಲವು ಅಪರಾಧಗಳಿಗೆ ಅನ್ವಯಿಸದಿರುವುದು.-** ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) ಅಧ್ಯಾಯ XXXVI ರಲ್ಲಿ ಇರುವುದು ಯಾವುದೂ ಈ ಮುಂದಿನವುಗಳಿಗೆ, ಎಂದರೆ,-

(i) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುವೇ ಅಧಿನಿಯಮಿತಿಗಳ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧಕ್ಕೆ; ಅಥವಾ

(ii) ಅಂಥ ಅಪರಾಧಗಳೊಂದಿಗೆ ವಿಚಾರಣೆ ಮಾಡಬಹುದಾದಂಥ ಆ ಸಂಹಿತೆಯ ಉಪಬಂಧಗಳ ಅಡಿಯಲ್ಲಿನ ಯಾವುವೇ ಇತರ ಅಪರಾಧಗಳಿಗೆ

– ಅನ್ವಯವಾಗತಕ್ಕದ್ದಲ್ಲ.

ಮತ್ತು (i)ನೇ ಖಂಡ ಅಥವಾ (ii)ನೇ ಖಂಡದಲ್ಲಿ ಉಲ್ಲೇಖಿಸಿರುವ ಪ್ರತಿಯೊಂದು ಅಪರಾಧವನ್ನು, ಆ ಅಧ್ಯಾಯದ ಉಪಬಂಧಗಳನ್ನು ಅಧಿನಿಯಮಿತಿಗೊಳಿಸಿರದಿದ್ದರೆ ಹೇಗೋ ಹಾಗೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯವು ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು.

## ಅನುಸೂಚಿ

**(2ನೇ ಪ್ರಕರಣವನ್ನು ನೋಡಿ)**

1. ಮೈಸೂರು ಲಾಟರಿಗಳ ಮತ್ತು ಬಹುಮಾನ ಸ್ಪರ್ಧೆಗಳ (ನಿಯಂತ್ರಣ ಮತ್ತು ತೆರಿಗೆ) ಅಧಿನಿಯಮ, 1951 (1951ರ ಮೈಸೂರು ಅಧಿನಿಯಮ 27);
2. ಮೈಸೂರು ಜೂಜು ತೆರಿಗೆ ಅಧಿನಿಯಮ, 1932 (1932ರ ಮೈಸೂರು ಅಧಿನಿಯಮ 9);
3. ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 22);
4. ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 25);
5. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 35);
6. ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ, 1958 (1958ರ ಕರ್ನಾಟಕ ಅಧಿನಿಯಮ 30);
7. ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 14);
8. ಕರ್ನಾಟಕ ಅಬ್ಕಾರಿ ಅಧಿನಿಯಮ, 1965 (1966ರ ಕರ್ನಾಟಕ ಅಧಿನಿಯಮ 21);
9. ಕರ್ನಾಟಕ ವೃತ್ತಿಗಳ, ವ್ಯಾಪಾರಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35); ಮತ್ತು

10. ಕರ್ನಾಟಕ ಸ್ಥಳೀಯ ಪ್ರದೇಶಗಳೊಳಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲಣ ತೆರಿಗೆ ಅಧಿನಿಯಮ, 1979 (1979ರ ಕರ್ನಾಟಕ ಅಧಿನಿಯಮ 27).

* * *

The above translation of the Karnataka Economic Offences (Inapplicability of Limitation) Act, 1981 (10 of 1982) shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963).

**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಅದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ.ಕೆ. ಬೋರೇಗೌಡ**

ಸರ್ಕಾರದ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

ಪಿ.ಆರ್. 821